Grokipedia v0.1

# ಗ್ರೋಕಿಪಿಡಿಯಾ ಎಲಾನ್ ಐಡಿಯಾ

**ತಂತ್ರಜ್ಞಾನವೇ ಭವಿಷ್ಯ ಎಂದು ಒತ್ತಿ ಹೇಳುತ್ತಿರುವ ಎಲಾನ್ ಮಸ್ಕ್, ಎಐ ಆಧರಿತ ಹೊಸ ಮಾಹಿತಿ ಕಣಜ ಪರಿಚಯಿಸಿದ್ದಾರೆ. ಇದು ಕ್ಷಣಾರ್ಧದಲ್ಲಿ ಹಲವು ಆಯಾಮಗಳಲ್ಲಿ ಮಾಹಿತಿಯನ್ನು ಕಣ್ಣಮುಂದೆ ತಲುಪಿಸುವ ಚಾಕಚಕ್ಯತೆ ಹೊಂದಿದೆ.**

**■ ಶಶಿಕುಮಾರ್ ಸಿ.**

ಮಾಹಿತಿ ಕಣಜ ಎಂದಾಕ್ಷಣ ನೆನಪಿಗೆ ಬರುವುದು ವಿಕಿಪಿಡಿಯಾ. ಇದಕ್ಕೆ ಆನ್‌ಲೈನ್‌ನಲ್ಲಿ ಪರ್ಯಾಯ ವೇದಿಕೆಗಳೇ ಕಾಣುತ್ತಿರಲಿಲ್ಲ. ಇಂತಹ ಅಗ್ರಮಾನ್ಯ ವಿಕಿಪಿಡಿಯಾಗೂ ಪರ್ಯಾಯವಾಗಿ ಹೊಸ ಮಾಹಿತಿ ಕಣಜವೊಂದು ಹುಟ್ಟಿಕೊಂಡಿದೆ. ಅದುವೇ 'ಗ್ರೋಕಿಪಿಡಿಯಾ' (Grokipedia). ಇದು ಎಲಾನ್ ಮಸ್ಕ್ ಹುಟ್ಟುಹಾಕಿದ ಎಐ ಆಧರಿತ ಮಾಹಿತಿ ಕಣಜವಾಗಿದ್ದು, ಮಾಹಿತಿಯೊಂದನ್ನು ಹಲವು ಆಯಾಮಗಳಲ್ಲಿ ಕ್ಷಣಾರ್ಧದಲ್ಲಿ ಒದಗಿಸಲಿದೆ.

ಟೆಸ್ಲಾ, ಸ್ಪೇಸ್‌ಎಕ್ಸ್ ಮತ್ತು ಎಕ್ಸ್‌ನಂತಹ ತಂತ್ರಜ್ಞಾನ ಆಧರಿತ ಕಂಪನಿಗಳನ್ನು ಹುಟ್ಟುಹಾಕಿರುವ ಎಲಾನ್ ಮಸ್ಕ್, ವಿಕಿಪಿಡಿಯಾಗೆ ಪ್ರಬಲ ಪ್ರತಿಸ್ಪರ್ಧಿಯನ್ನು ಜಗತ್ತಿಗೆ ಪರಿಚಯಿಸಿದ್ದಾರೆ. ಅವರ ಒಡೆತನದ ಎಕ್ಸ್‌ಎಐ (xAI) ಕಂಪನಿಯಡಿಯಲ್ಲಿ 'ಗ್ರೋಕಿಪಿಡಿಯಾ' ಕಾರ್ಯನಿರ್ವಹಿಸುತ್ತಿದೆ.

ಎಕ್ಸ್‌ಎಐನ ಕೃತಕ ಬುದ್ಧಿಮತ್ತೆ ಶಕ್ತಿಯನ್ನು ಬಳಸಿಕೊಂಡು, ಮಾಹಿತಿಯನ್ನು ಪರಿಣಾಮಕಾರಿಯಾಗಿ ಒದಗಿಸುವ ಉದ್ದೇಶ ಗ್ರೋಕಿಪಿಡಿಯಾದ್ದು. ಈ ಮೂಲಕ ಹೆಚ್ಚು ಕ್ರಿಯಾತ್ಮಕ, ಬುದ್ಧಿವಂತ ಮತ್ತು ಸಂವಾದಾತ್ಮಕ ಮಾಹಿತಿಯನ್ನು ಜಗತ್ತಿಗೆ ಒದಗಿಸಬೇಕೆಂಬುದು ಎಲಾನ್ ನಿಲುವು. ಸದ್ಯ ಬಿಡುಗಡೆಗೊಂಡಿರುವುದು ಗ್ರೋಕಿಪಿಡಿಯಾ 0.1 ಆವೃತ್ತಿ. ಇದರ ಸುಧಾರಿತ ಆವೃತ್ತಿಗಳು ಅಪ್‌ಡೇಟ್‌ಗಳೊಂದಿಗೆ ಬರಲಿದ್ದು, ಎಕ್ಸ್ ಪ್ರೀಮಿಯಂ ಬಳಕೆದಾರರಿಗೆ ಲಭ್ಯ.

ಗ್ರೋಕಿಪಿಡಿಯಾ, ಸಾಂಪ್ರದಾಯಿಕ ಆನ್‌ಲೈನ್ ವಿಶ್ವಕೋಶಗಳಿಗಿಂತ ಭಿನ್ನವಾಗಿದೆ. ಇದು ಕೇವಲ ಲೇಖನಗಳ ಸ್ಥಿರ ಭಂಡಾರವಲ್ಲ. ಬಳಕೆದಾರರು ಕೇಳುವ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ನಿಖರ ಉತ್ತರಗಳನ್ನು ನೀಡುತ್ತದೆ. ಇದಕ್ಕಾಗಿ ತನ್ನ ಎಐ ಅಲ್ಗರಿದಮ್‌ಗಳನ್ನು ಬಳಸುತ್ತದೆ. ದೀರ್ಘವಾದ, ಪಠ್ಯಭರಿತ ಪುಟಗಳನ್ನು ಓದುವುದಕ್ಕಿಂತ ಹೆಚ್ಚಾಗಿ ಪರಿಣತರೊಂದಿಗೆ ಸಂಭಾಷಣೆ ನಡೆಸುವಂತಹ ಮಾದರಿಯಲ್ಲಿ ಇದು ಮಾಹಿತಿಯನ್ನು ಬಳಕೆದಾರರಿಗೆ ಒದಗಿಸುತ್ತದೆ.

## ಗ್ರೋಕಿಪಿಡಿಯಾದ ವಿಶೇಷತೆ

ನೈಜಸಮಯದ ನವೀಕರಣಗೊಂಡ ಮಾಹಿತಿಗೆ ಹೆಚ್ಚಿನ ಆದ್ಯತೆ ನೀಡುತ್ತದೆ. ಆನ್‌ಲೈನ್‌ನಲ್ಲಿ ಕ್ಷಣಕ್ಷಣಕ್ಕೂ ಅಪ್‌ಡೇಟ್ ಆಗುವ ಮಾಹಿತಿಯನ್ನು ಆಧರಿಸಿ, ಬಳಕೆದಾರರಿಗೆ ಮಾಹಿತಿ ಒದಗಿಸುತ್ತದೆ. ಅಪ್‌ಡೇಟ್ ಆಗಲು ಎಐ ಸಹಕಾರಿಯಾಗಲಿದೆ. ಜೊತೆಗೆ, ಸಂವಾದಾತ್ಮಕ ರೀತಿಯಲ್ಲಿ ಮಾಹಿತಿ ಒದಗಿಸುವುದು ಇದರ ವಿಶೇಷ. ಇಲ್ಲಿ ಬಳಕೆದಾರರ ಪ್ರಶ್ನೆಗಳಿಗೆ ಪೂರ್ವಲಿಖಿತ ಲೇಖನಗಳನ್ನು ಒದಗಿಸುವುದರ ಬದಲು ಸಂದರ್ಭೋಚಿತ ಉತ್ತರಗಳನ್ನು ತಲುಪಿಸುತ್ತದೆ.

ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಲಿರುವ ಈ ವೇದಿಕೆಯು, ವಸ್ತುಸ್ಥಿತಿ ಏನಿದೆ ಎನ್ನುವ ಮಾಹಿತಿಯನ್ನಷ್ಟೇ ಒದಗಿಸುತ್ತದೆ. ಈ ಬಗ್ಗೆ ಸ್ವತಃ ಮಾತನಾಡಿರುವ ಎಲಾನ್, 'ಗ್ರೋಕಿಪಿಡಿಯಾ ನಿಖರತೆ ಮತ್ತು ಪ್ರಸ್ತುತತೆಯ ಮೇಲೆ ಹೆಚ್ಚು ಗಮನ ಹರಿಸುತ್ತದೆ' ಎನ್ನುತ್ತದೆ. ಪಕ್ಷಪಾತವಾಗಿ ಒಂದು ವರ್ಗದ ಮೇಲೆ ಪರಿಣಾಮ ಬೀರುವಂತಹ ಮಾಹಿತಿಯನ್ನು ಇದು ಒದಗಿಸುವುದಿಲ್ಲ ಎನ್ನುವುದು ಕಂಪನಿಯ ಮಾತು.

ಗ್ರೋಕಿಪಿಡಿಯಾದ ಇಡೀ ವ್ಯವಸ್ಥೆಯನ್ನು ಎಕ್ಸ್‌ಎಐನ ಸ್ವಯಂ ಸೇವಕ ತಂಡ ನಿಯಂತ್ರಿಸುತ್ತದೆ. ವೇದಿಕೆಯಲ್ಲಿ ಪ್ರದರ್ಶನಗೊಳ್ಳುವ ಲೇಖನಗಳು, ಅವುಗಳ ಸಂಪಾದನೆ ಹಾಗೂ ಸಂಕಲನ ಕೂಡ ಇದೇ ತಂಡ ನೋಡಿಕೊಳ್ಳುತ್ತದೆ. ಗ್ರೋಕಿಪಿಡಿಯಾದಲ್ಲಿ ಈಗ 8,85,279 ಲೇಖನಗಳಿವೆ. ವಿಕಿಪಿಡಿಯಾದಲ್ಲಿ ಈಗಾಗಲೇ 65 ಮಿಲಿಯನ್ ಲೇಖನಗಳಿವೆ. ವಿಕಿಪಿಡಿಯಾದ ರೀತಿ ಬಳಕೆದಾರರ ಹಸ್ತಕ್ಷೇಪ ಗ್ರೋಕಿಪಿಡಿಯಾದಲ್ಲಿಲ್ಲ. ಇಲ್ಲಿರುವ ಮಾಹಿತಿ ತಿದ್ದಲು ಆಗುವುದಿಲ್ಲ. ಎಐ ಆಧರಿತವಾಗಿ ಮಾಹಿತಿ ತಾನಾಗಿಯೇ ಅಪ್‌ಡೇಟ್ ಆಗಲಿದೆ. ಅದಕ್ಕೂ ಮಿಗಿಲಾಗಿ ಬಳಕೆದಾರರು ಸಲಹೆ ಸೂಚನೆ ಕೊಡಲು ಫೀಡ್‌ಬ್ಯಾಕ್ ಮೂಲಕ ತಲುಪಿಸಬಹುದು.

### ಕಾರ್ಯನಿರ್ವಹಣೆ ಹೇಗೆ?

ಈ ತಂತ್ರಾಂಶವು ಈಗಾಗಲೇ ವೆಬ್, ನ್ಯೂಸ್ ಪೋರ್ಟಲ್, ಪುಸ್ತಕಗಳು, ಸಂಶೋಧನೆಗಳು ಸೇರಿದಂತೆ ಹಲವು ಮೂಲಗಳಿಂದ ಡಾಟಾ ರಿಟ್ರೀವಲ್ ಮಾಡಿ ಗ್ರೋಕ್ ರಿಯಲ್ ಟೈಂ ಸ್ವಾಪ್‌ನೊಂದಿಗೆ ಮಾಹಿತಿ ಪ್ರಸ್ತುತಪಡಿಸುತ್ತಿದೆ. ಇದು ವದಂತಿ ಹಾಗೂ ಗಾಳಿಸುದ್ದಿಗಳನ್ನು ಸಂಪೂರ್ಣವಾಗಿ ಬದಿಗೆ ತಳ್ಳಿ, ನಿಖರ ಮಾಹಿತಿಯನ್ನಷ್ಟೇ ನೀಡುತ್ತದೆ.

ವಿಕಿಪಿಡಿಯಾದಲ್ಲಿ ಮಾನವ ಹಸ್ತಕ್ಷೇಪ ಇದ್ದು, ಅಪ್‌ಡೇಟ್ ವಿಚಾರದ ಕೆಲಸಗಳು ತಡವಾಗಿ ಆಗುತ್ತವೆ. ಗ್ರೋಕಿಪಿಡಿಯಾದಲ್ಲಿ ನೈಜ ಸಮಯದಲ್ಲಿ ಆಗಿಂದಾಗ್ಗೆ ಮಾಹಿತಿಯು ಅಪ್‌ಡೇಟ್ ಆಗುತ್ತಲೇ ಇರುತ್ತದೆ. ವಿಕಿಪಿಡಿಯಾ ಟ್ರಸ್ಟ್ ಆಧರಿತ ಮಾಹಿತಿ ಕಣಜ. ಗ್ರೋಕಿಪಿಡಿಯಾ ವ್ಯಾಪಾರದ ಉದ್ದೇಶದಿಂದ ನಿರ್ಮಿಸಿದ ವೇದಿಕೆಯಾಗಿದೆ.

## ಜಿದ್ದಿಗೆ ಬಿದ್ದರಾ ಮಸ್ಕ್?

ಎಲಾನ್ ಮಸ್ಕ್ ಈ ಹಿಂದೆ ವಿಕಿಪಿಡಿಯಾವನ್ನು ಟೀಕಿಸಿದ್ದರು. ವಿಕಿಪಿಡಿಯಾವು ಅಸಮಂಜಸ ಮತ್ತು ಸಾಂದರ್ಭಿಕವಾಗಿ ಪಕ್ಷಪಾತದಿಂದ ಕೂಡಿದೆ. ಮಾಹಿತಿಯನ್ನು ಅಪ್‌ಡೇಟ್ ಮಾಡುವುದರಲ್ಲಿಯೂ ಹಿಂದೆ ಬಿದ್ದಿದೆ ಎಂದು ಬಹಿರಂಗವಾಗಿ ಟೀಕಿಸಿದ್ದರು. ಇದಾದ ಬಳಿಕ ಅವರು ತಮ್ಮದೇ ಆನ್‌ಲೈನ್ ಮಾಹಿತಿ ಕಣಜ ಪರಿಚಯಿಸಿದ್ದಾರೆ. ವಿಕಿಪಿಡಿಯಾ ಮೇಲಿನ ಜಿದ್ದಿಗೆ ಹೊಸ ಮಾಹಿತಿ ಕಣಜ ಪರಿಚಯಿಸಿದ್ದಾರೆ ಎನ್ನುತ್ತಿದ್ದಾರೆ ಅಂತರ್ಜಾಲ ಬಳಕೆದಾರರು.

ಎಲಾನ್ ಮಾತುಗಳ ಪ್ರಕಾರ, ಗ್ರೋಕಿಪಿಡಿಯಾವು 'ಪರಿಶೀಲಿಸಬಹುದಾದ, ಬುದ್ಧಿವಂತ ಮತ್ತು ಬಳಕೆದಾರರಿಗೆ ತಕ್ಷಣವೇ ಉಪಯುಕ್ತವಾಗುವ ರೀತಿಯಲ್ಲಿ ಸತ್ಯಾಸತ್ಯತೆಯನ್ನು ತಲುಪಿಸುವ ವೇದಿಕೆ. ಸಿದ್ಧ ಲೇಖನಗಳನ್ನು ಸುಖಾಸುಮ್ಮನೆ ಓದಿಕೊಂಡು ಹೋಗುವುದರ ಬದಲು, ಎಐ ಸಹಾಯ ಪಡೆದು, ತ್ವರಿತವಾಗಿ ಪರಿಣಾಮಕಾರಿ ಮಾಹಿತಿ ಪಡೆಯಲು ಗ್ರೋಕಿಪಿಡಿಯಾ ಉತ್ತಮ ವೇದಿಕೆ'. ■